# ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) |
| 2 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | (2411) 254 |
| 3 | ಉತ್ತರಿಸಬೇಕಾದ ದಿನಾಂಕ | : | 27.03.2026 |
| 4 | ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು |

| ಕ್ರ ಸಂ | ವಿಷಯ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮನರೇಗಾ ಯೋಜನೆಯಡಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಬರಗಾಲಿನ ತಾಂತ್ರಿಕ ಸಹಾಯಕ (ಬಿ.ಎಫ್.ಟಿ)ರಾಗಿ ಹಲವು ಜನರು 10 ವರ್ಷಗಳಿಗೂ ಮೇಲ್ಪಟ್ಟು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಗ್ರಾಮ ಪಂಚಾಯತಿಗಳಲ್ಲಿ ಬರಿಗಾಲಿನ ತಂತ್ರಜ್ಞರು (Barefoot Technicians - BFT) ಗೌರವಧನ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಹುದ್ದೆಗಳಿಗೆ ನೇಮಕಾತಿಯನ್ನು ಜಿಲ್ಲೆಗಳಲ್ಲಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಅಗತ್ಯತೆಗನುಗುಣವಾಗಿ, ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಸದರಿ BFT ಗಳ ಕಾರ್ಯನಿರ್ವಹಣೆ ಪರಿಶೀಲಿಸಿ ನೀಡುವ ಶಿಫಾರಸ್ಸಿನ ಮೇರೆಗೆ ವಾರ್ಷಿಕ ನವೀಕರಣ ಮಾಡಲಾಗುತ್ತಿದೆ. |
| ಆ) | ಸದರಿ ನೌಕರರಿಗೆ ಕೇವಲ ರೂ.18,500/- ಗಳ ಸಂಬಳ ಮಾತ್ರ ನೀಡುತ್ತಿದ್ದು, ಯಾವುದೇ ಸೇವಾ ಭದ್ರತೆಯಿಲ್ಲದೆ ಜೀವನ ನಡೆಸುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ: | BFT ಗಳಿಗೆ ಮಾಸಿಕ ರೂ.18,500/- ಗಳ ಗೌರವಧನವನ್ನು ಪಾವತಿಸಲಾಗುತ್ತಿದೆ. ಸದರಿಯವರ ಸೇವೆಯನ್ನು ಕೇಂದ್ರ ಸರ್ಕಾರದ ನಿರ್ದೇಶನದನ್ವಯ ನರೇಗಾ ಯೋಜನೆಯ ಅನುಷ್ಠಾನದ ಅಗತ್ಯತೆಗನುಗುಣವಾಗಿ ವಾರ್ಷಿಕ ಅವಧಿಗೆ ಗೌರವಧನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. |
| ಇ) | ಸದರಿ ನೌಕರರು ಮನರೇಗಾ ಯೋಜನೆಯಡಿ ವಾರ್ಷಿಕ ಕ್ರಿಯಾ ಯೋಜನೆ ರೂಪಿಸುವುದು ಹಾಗೂ ಗ್ರಾಮಗಳಲ್ಲಿ ಕೈಗೊಳ್ಳಬೇಕಿರುವ ಕೆಲಸಗಳನ್ನು ಗುರುತಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಇದೆಯೇ: | ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಗ್ರಾಮ ಪಂಚಾಯತಿಯ ಹಂತದಲ್ಲಿ ಗ್ರಾಮ ಸಭೆ ಕೈಗೊಂಡು ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸಲಾಗುತ್ತಿದೆ.<br>ಗ್ರಾಮ ಪಂಚಾಯತಿಗಳಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೈಗೊಳ್ಳಬಹುದಾದ ಕಾಮಗಾರಿಗಳನ್ನು ಗುರುತಿಸಲು ತಾಂತ್ರಿಕ ಸಹಾಯಕರಿಗೆ BFT ಗಳು ಅಗತ್ಯ ನೆರವನ್ನು ಒದಗಿಸುತ್ತಾರೆ. BFTಗಳಿಗೆ ವಹಿಸಿರುವ ಜವಾಬ್ದಾರಿಗಳ ಜಾಬ್ ಚಾರ್ಟ್ ಪ್ರತಿಯನ್ನು ಅನುಬಂಧದಲ್ಲಿ ಗುರುತಿಸಿ ಲಗತ್ತಿಸಿದೆ. |
| ಈ) | ಇದ್ದಲ್ಲಿ, ಸದರಿ ನೌಕರರನ್ನು ಗ್ರಾಮ ಪಂಚಾಯಿತಿ ನೌಕರರೆಂದು ಪರಿಗಣಿಸಿ. ಅಗತ್ಯ ಸೇವಾ ಸೌಲಭ್ಯಗಳನ್ನು ನೀಡುವ ಕುರಿತು ಸರ್ಕಾರದ ನಿಲುವೇನು? | BFT ಗಳನ್ನು ಅರೆ ಕುಶಲ ಕಾರ್ಮಿಕರೆಂದು ಪರಿಗಣಿಸಿ ಕಾಮಗಾರಿಗಳ ಸಾಮಾಗ್ರಿ ವೆಚ್ಚದಡಿ ಮಾಸಿಕ ಗೌರವಧನವನ್ನು ಪಾವತಿಸಲಾಗುತ್ತಿದೆ. ಆದುದರಿಂದ, ಸದರಿಯವರನ್ನು ಗ್ರಾಮ ಪಂಚಾಯತಿ ನೌಕರರೆಂದು ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

**ಸಂಖ್ಯೆ: ಗ್ರಾಅಪ/133(22)/ಉಖಾಯೋ/2026, 2085842**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು

ಅನುಬಂಧ

ಬಿಎಫ್‌ಟಿಗಳು (Barefoot Technician) ನಿರ್ವಹಿಸಬೇಕಾದ ಕಾರ್ಯಗಳು:

1. ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೈಗೊಳ್ಳಬಹುದಾದ ಕಾಮಗಾರಿಗಳನ್ನು ಗುರುತಿಸಲು ತಾಂತ್ರಿಕ ಸಹಾಯಕರಿಗೆ ಸಹಾಯ ಮಾಡುವುದು.
2. ಮಹಾತ್ಮಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಫಲಾನುಭವಿಗಳ baseline information (land use, ownership etc.,)ನ್ನು ಕ್ರೋಢೀಕರಿಸಿ ತಾಂತ್ರಿಕ ಸಹಾಯಕರಿಗೆ ಒದಗಿಸುವುದು.
3. ಯೋಜಿತ ಕಾಮಗಾರಿಗಳ ವ್ಯಾಪ್ತಿ ಮತ್ತು ಸ್ವರೂಪದ ತಾಂತ್ರಿಕ ಸರ್ವೆ, ಅಂದಾಜು ಪತ್ರಿಕೆ ತಯಾರಿಕೆ, ಡ್ರಾಯಿಂಗ್ ಮತ್ತು ಡಿಸೈನ್ ಮಾಡಲು ತಾಂತ್ರಿಕ ಸಹಾಯಕರಿಗೆ ಸಹಾಯ ಮಾಡುವುದು.
4. ಕೂಲಿಕಾರರಿಂದ ಹಾಗೂ Mateಗಳಿಂದ ನಮೂನೆ-6ರಲ್ಲಿ ಕೆಲಸಕ್ಕಾಗಿ ಬೇಡಿಕೆ ಪಡೆದು ಗ್ರಾಮ ಪಂಚಾಯಿತಿಗೆ ಸಲ್ಲಿಸುವುದು.
5. ಕಾಮಗಾರಿಗಳ ಸ್ಥಳ ನಿರ್ವಹಣೆ, Mateಗಳ ಮೇಲುಸ್ತುವಾರಿ ಮಾಡುವುದು.
6. ಸಕಾಲದಲ್ಲಿ ಕಾಮಗಾರಿಯ ಅಳತೆ ಮಾಡಲು ತಾಂತ್ರಿಕ ಸಹಾಯಕರಿಗೆ ನೆರವಾಗುವುದು.
7. ಕಾಮಗಾರಿಯ ಸ್ಥಳದಲ್ಲಿ ಅವಶ್ಯಕ ದಾಖಲೆಗಳನ್ನು ನಿರ್ವಹಿಸುವುದು.
8. ಗ್ರಾಮ ಪಂಚಾಯಿತಿಯಿಂದ ಹಾಜರಾತಿ ಪಟ್ಟಿ ಪಡೆದುಕೊಂಡು, ಕೂಲಿಕಾರರ ಹಾಜರಾತಿ ದಾಖಲಿಸಿ ಸಲ್ಲಿಸುವುದು.
9. ಕಾಮಗಾರಿಯ ಸ್ಥಳದಲ್ಲಿ ಒದಗಿಸಬೇಕಾದ ಸೌಲಭ್ಯಗಳಾದ ಕುಡಿಯುವ ನೀರು, ನೆರಳು, ಶಿಶುಪಾಲನೆ, ಪ್ರಥಮ ಚಿಕಿತ್ಸಾ ಪೆಟ್ಟಿಗೆ ಲಭ್ಯವಿರುವುದರ ಬಗ್ಗೆ ಖಚಿತಪಡಿಸಿಕೊಳ್ಳುವುದು.
10. ಕಾಮಗಾರಿಗಳಿಗೆ ಅವಶ್ಯಕವಿರುವ ಸಾಮಗ್ರಿ ಮತ್ತು ಅಂದಾಜಿತ ಮಾನವ ದಿನಗಳ ಬಗ್ಗೆ ಸಂಕ್ಷಿಪ್ತ ಟಿಪ್ಪಣಿ ತಯಾರಿಸುವುದು.
11. BFTಗಳು ಸ್ವಂತ ಸ್ಮಾರ್ಟ್ ಪೋನ್ ಹೊಂದುವುದು. GeoMGNREGA app ಮೂಲಕ ಕಾಮಗಾರಿಗಳ ಮೂರು ಹಂತದ ಫೋಟೋ, ಜಿಯೋ ಟ್ಯಾಗಿಂಗ್ ಮಾಡುವುದು. ಮೊದಲ ಹಂತದ ಫೋಟೋ ಜಿಯೋಟ್ಯಾಗ್ ಮಾಡುವಾಗ ಕಡ್ಡಾಯವಾಗಿ ಸಾರ್ವಜನಿಕ ಮಾಹಿತಿ ಫಲಕ ಅಳವಡಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.
12. ಮಹಾತ್ಮಗಾಂಧಿ ನರೇಗಾ ಯೋಜನೆಗೆ ಸಂಬಂಧಿಸಿದಂತೆ ಕಾರ್ಯಕ್ರಮ ಅಧಿಕಾರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ತಾಂತ್ರಿಕ ಸಹಾಯಕರು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.